Kristu Jayanti College
AUTONOMOUS Bengaluru
Reaccredited 'A' Grade by NAAC | Affiliated to Bengaluru North University

# DEPARTMENT OF KANNADA
# REPORT ON GUEST LECTURE

**Title: "ಕರ್ನಾಟಕ ಸಂಸ್ಕೃತಿಗೆ ವಚನಕಾರರ ಕೊಡುಗೆ' '**

Type: Guest Lecture

Date: 25-09-2018

Classes Attended & **Number of beneficiaries: 205 students.**

Name and details of the Resource Person: ಡಾ. ಡಿ.ಕೆ.ಚಿತ್ತಯ್ಯ ಪೂಜಾರ್, ಪ್ರಾಧ್ಯಾಪಕರು ಹಾಗೂ ಬರಹಗಾರರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ.ಬೆಂ.ವಿ.ವಿ.

Objective: ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದಲ್ಲಿನ ವಚನಕಾರರ ಚಿಂತನೆಗಳ ಕುರಿತು ಅರಿತುಕೊಂಡರು.

ಸಮಾಜದಲ್ಲಿ ವಚನಕಾರರ ವಿಚಾರಧಾರೆಯನ್ನು ವಿವಿಧ ಆಯಾಮಗಳಲ್ಲಿ ಕುರಿತು ಗ್ರಹಿಸುವರು. ಸಾಮಾಜಿಕ ಚಳುವಳಿಯ ಮೂಲಕ ಸಮಾನತೆಯ ನಿಲುವು ಕುರಿತು ತಿಳಿಯುವರು. ಲಿಂಗ ಸಮಾನತೆ ಕಾಯಕತತ್ವ, ಧೋರಣೆಯನ್ನು ವಚನಗಳ ಹಿನ್ನಲೆಯಲ್ಲಿ ತಿಳಿಸಿ, ಹಲವು ವಚನಕಾರರನ್ನು ಅನುಸರಿಸಬೇಕಾಗಿರುವುದರ ಅನಿವಾರ್ಯತೆಯನ್ನು ಅವಲೋಕಿಸುವರು.

**Brief Write up on the Programme: [min 10 lines]** "ಕರ್ನಾಟಕ ಸಂಸ್ಕೃತಿಗೆ ವಚನಕಾರರ ಕೊಡುಗೆ' ಎಂಬ ವಿಷಯ ವಚನಕಾರರು ಸಮಾಜಕ್ಕೆ ನೀಡಿರುವ ಅದ್ವಿತೀಯವಾದ ಕೊಡುಗೆ ಕುರಿತು ಅವಲೋಕಿಸುವ ನೆಲೆಯಲ್ಲಿ ಈ ಅತಿಥಿ ಉಪನ್ಯಾಸವನ್ನು ಆಯೋಜಿಸಲಗಿತ್ತು. ಮೂರನೇ ಸೆಮಿಸ್ಟರ್ ಬಿ.ಕಾಂ. ವಿದ್ಯಾರ್ಥಿಗಳ ಪಠ್ಯದ ಹಿನ್ನೆಲೆಯಲ್ಲಿ ನಾಡಿನ ಉದಯೋನ್ಮುಖ ಬರಹಗಾರರೂ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಆಗಿರುವ ಡಾ. ಡಿ.ಕೆ.ಚಿತ್ತಯ್ಯ ಪೂಜಾರ್ ರವರು ವಿದ್ಯಾರ್ಥಿಗಳನ್ನ ಉದ್ದೇಶಿಸಿ ಮಾತನಾಡಿದರು. ಪ್ರಸ್ತುತ ಸಮಾಜದ ಜೀವನ ಶೈಲಿಯನ್ನು ವಚನಗಳೊಂದಿಗೆ ಮುಖಾಮುಖಿಯಾಗಿಸಿ ಲಘು ಹಾಸ್ಯದೊಂದಿಗೆ ವಿಶ್ಲೇಷಿಸಿದರು, ವಚನಕಾರರ

ದಾಸೋಹ ಪದ್ಧತಿ, ಕಾಯಕತತ್ವ, ಲಿಂಗ ಸಮಾನತೆ, ಅತಿಸಂಗ್ರಹ ವೃತ್ತಿ, ಅಹಿಂಸಾ ತತ್ವ, ಅನುಭವಮಂಟಪ ಇವು ಕೇವಲ ಕರ್ನಾಟಕಕ್ಕಷ್ಟೆ ಸೀಮಿತವಲ್ಲ, ಇಡೀ ವಿಶ್ವಕ್ಕೆ ಮಾದರಿ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಾಮಾಜಿಕ ಚಳುವಳಿಯಾಗಿ ರೂಪಗೊಂಡ ಈ ಸಾಹಿತ್ಯ ಪಂಪ, ರನ್ನ, ಶಾಂತಿನಾಥರ0ತೆ ಮಾರ್ಗವನ್ನು ಅನುಸರಿಸದೆ, ಸ್ಥಳೀಯ ಭಾಷೆಯ ಮೂಲಕ ಸರಳ ನುಡಿಯಲ್ಲಿ ಸಾಹಿತ್ಯ ರಚಸಿದ ಅದರ ವೈಶಿಷ್ಟ್ಯತೆಯನ್ನು ತಿಳಿಸಿದರು. ೧೨ನೇ ಶತಮಾನದ ಅಭಿಪ್ರಾಯ ಸಾಮ್ಯತೆಯ ಮಹತ್ವವನ್ನು ವಿವರಿಸಿದರಲ್ಲದೆ, ಪ್ರಸ್ತುತ ಸನ್ನಿವೇಶಗಳನ್ನು ಎದುರಿಸಲು ವಚನಕಾರರ ಚಿಂತನಾಶೀಲತೆಯ ಅನಿವಾರ್ಯತೆ ಕುರಿತು ಚರ್ಚಿಸಿದರು. ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ್ದರು.

feedback: ಬಿ.ಕಾಂ. ಮೂರನೇ ಸೆಮಿಸ್ಟರ್‌ನ ಎಲ್ಲಾ ತರಗತಿಗಳು ಸು. ೨೦೫ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಂಡರು. ಆಸಕ್ತಿಯಿಂದ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳು ಚರ್ಚೆಯಲ್ಲಿ ಭಾಗವಹಿಸಿದರು.

**Photo** ***[one or two with captions]***



*ಚಿತ್ರಗಳು: ಡಾ. . ಡಿ.ಕೆ.ಚಿತ್ತಯ್ಯ ಪೂಜಾರ್ ರವರು ವಿದ್ಯಾರ್ಥಿಗಳೊಂದಿಗೆ ಸಂವಾದ*



ಚಿತ್ರಗಳು: ಡಾ. . ಡಿ.ಕೆ.ಚಿತ್ತಯ್ಯ ಪೂಜಾರ್ ರವರ ಉಪನ್ಯಾಸವನ್ನು ಆಲಿಸುತ್ತಿರುವ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು.

| | |
|---|---|
| Report prepared by | Signature of HoD |
| Prof.Venkateshappa P | Lt. Sarvesh B S |